ಇಷ್ಟವಾಗುತ್ತಿರಲಿಲ್ಲ; ತನ್ನನ್ನು ಒಂಟಿಯಾಗಿ ಬಿಟ್ಟುಹೋಗುತ್ತೀ ಎಂದು ಗೊಣಗುತ್ತಿದ್ದ. ಆದರೆ, ಹಮೀದ್ ಅವನ ಗೊಣಗಾಟಕ್ಕೆ ಕಿವಿ ಕೊಡುತ್ತಿರಲಿಲ್ಲ. ಆಗಾಗ ಅವನಿಗೆ ಜನರೇನೋ ಕಾಣುತ್ತಿದ್ದರು. ಆದರೆ, ಅವರು ಅವನನ್ನು ಒಮ್ಮೆಯೂ ನೋಡದೆ ಅವಸರವಸರವಾಗಿ ನಡೆದುಕೊಂಡು ಹೋಗಿಬಿಡುತ್ತಿದ್ದರು. ಹಗಲಿನ ಹೊತ್ತು ಅವನು ಆ ಹುಡುಗಿಗಾಗಿ ಕಾಯುತ್ತಿದ್ದ. ಹಾಗೆ ನೋಡಿದರೆ, ಹಗಲೆಲ್ಲಾ ಅವಳದೇ ಯೋಚನೆ. ರಾತ್ರಿಯಾದದ್ದೇ ತಾನು ಅವಳ ಜೊತೆ ಇರುವಂತೆ, ಸದ್ದಿಲ್ಲದ ಬೀದಿಗಳನ್ನು ಸುತ್ತುವಾಗ ಅವಳು ಮಾತಾಡುತ್ತ, ನಗುತ್ತ ತನ್ನ ಜೊತೆಗಿದ್ದಂತೆ, ಒಮ್ಮೊಮ್ಮೆ ಅವಳ ಕೈಯನ್ನು ತನ್ನ ಕುತ್ತಿಗೆಯ ಮೇಲಿಟ್ಟಂತೆ... ಅವಳೇನಾದರೂ ಅಂಗಡಿಗೆ ಬಂದರೆ ಅವಳು ಕೇಳಿದ್ದಕ್ಕಿಂತ ಒಂದು ತೂಕ ಹೆಚ್ಚೇ ಕೊಡುತ್ತಿದ್ದ; ಅವಳ ನಗುವಿಗಾಗಿ ಕಾಯುತ್ತಿದ್ದ. ಆಗಾಗ ಇಬ್ಬರೂ ಮಾತಾಡುತ್ತಿದ್ದರು – ಸ್ನೇಹದ, ಆತ್ಮೀಯತೆಯ ಮಾತುಗಳು. ದಿನಸಿ ಸಾಮಾನುಗಳ ಕೊರತೆಯಿದ್ದಾಗ ವಿಶೇಷ ಗಿರಾಕಿಗಳಿಗೆಂದೇ ರಹಸ್ಯವಾಗಿರಿಸಿದ್ದನ್ನು ಅವಳಿಗೆ ಕೊಟ್ಟುಬಿಡುತ್ತಿದ್ದ ಅವನು. ತುಸು ಧೈರ್ಯವಾದರೆ, ಅವಳ ಚೆಲುವಿನ ಬಗ್ಗೆ ಮೆಚ್ಚುಗೆ ಸೂಚಿಸುತ್ತಿದ್ದ; ಅವಳೇನಾದರೂ ಮುಖ ಅರಳಿಸಿ ನಕ್ಕರೆ ಅತೀವ ಹಂಬಲದಿಂದ, ಅಷ್ಟೇ ಗಾಬರಿಯಿಂದ ಒದ್ದಾಡುತ್ತಿದ್ದ. ಆ ಹುಡುಗಿಗೆ ಸಂಬಂಧಪಟ್ಟಂತೆ ಮನ್ಸೂರ್ ಜಂಬ ಕೊಚ್ಚಿಕೊಳ್ಳುತ್ತಿದ್ದನಲ್ಲ. ಅದನ್ನು ನೆನಿಸಿಕೊಂಡು ತನ್ನಲ್ಲೇ ನಗುತ್ತಿದ್ದ ಹಮೀದ್. ಅವಳು ಒಂದಷ್ಟು ದುಡ್ಡು ಕೊಟ್ಟು ಕೊಳ್ಳಬಹುದಾದ ಹುಡುಗಿಯಲ್ಲ; ನಯವಾದ ನಡವಳಿಕೆಯಿಂದ, ಧೈರ್ಯದಿಂದ ಒಲಿಸಿಕೊಳ್ಳಬೇಕಾದ ಹುಡುಗಿ. ಕಣ್ಣು ಕಿಸುರಾಗಿ ಅರೆ ಕುರುಡಾಗಿದ್ದ ಮನ್ಸೂರನಿಗಾಗಲೀ ಹಮೀದನಿಗಾಗಲೀ ಹಾಗೆ ಒಲಿಸಿಕೊಳ್ಳಬಲ್ಲ ಮಾತುಗಳಾಗಲೀ ದನಿಯಾಗಲೀ ಗೊತ್ತಿರಲಿಲ್ಲ.

ಒಂದು ಸಾಯಂಕಾಲ ಸಾಕಷ್ಟು ಹೊತ್ತಾದ

